Personnel Secretary to Hon'ble Minister for Public Works Department

Personnel Secretary to Hon'ble Minister for Rural Development & Panchayat Raj

Personnel Secretary to Hon'ble Minister for Social Welfare Department.

Personnel Secretary to Hon'ble Minister for Urban Development

Personnel Secretary to Hon'ble Minister for Women & Child Development

Personnel Secretary to Hon'ble Minister for Forest Department.

ಸರ್ಕಾರಿ ಸ್ವಾಮ್ಯದ ರೋಗಗ್ರಸ್ಥ ಕೈಗಾರಿಕೆಗಳು

801 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣಾ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರಿ ಸ್ವಾಮ್ಯದ ರೋಗಗ್ರಸ್ಥ ಕೈಗಾರಿಕೆಗಳಲ್ಲಿ ಹಣಕಾಸನ್ನು ತೊಡಗಿಸದಿರಲು ರಾಜ್ಯ ಸರ್ಕಾರ ತೀರ್ಮಾನಿಸಿದೆಯೇ?*

ಆ) *ಹಾಗಿದ್ದಲ್ಲಿ, ಅಸ್ವಸ್ಥ ಸರ್ಕಾರಿ ಕಂಪನಿಗಳ ಪುನರುಜ್ಜೀವನಕ್ಕೆ ಪರ್ಯಾಯ ಯೋಜನೆಯೇನಾದರೂ ಸರ್ಕಾರ ರೂಪಿಸಿದೆಯೇ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಪ್ರಸ್ತುತ, ಸರ್ಕಾರವು ಪರಿಣಿತ ತಂಡವನ್ನೊಳಗೊಂಡ ಸಾರ್ವಜನಿಕ ಉದ್ದಿಮೆಗಳ ಪುನಃ ನಿರ್ಮಾಣ ಸಮಿತಿಯೊಂದನ್ನು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ (ಸಾಉಮ) 23 ಎಆರ್‌ಯು 2000, ಬೆಂಗಳೂರು ದಿನಾಂಕ 15.03.2000 (ಪ್ರತಿಯನ್ನು ಲಗತ್ತಿಸಿದೆ) ರಚಿಸಿರುತ್ತದೆ. ಈ ಸಮಿತಿಯು ಪ್ರತಿಯೊಂದು ಉದ್ದಿಮೆಗೆ ಸಂಬಂಧಪಟ್ಟಂತೆ ವಿಶ್ಲೇಷಣೆ ನಡೆಸಿ ಪುನಃ ರಚನೆ/ ಬಂಡವಾಳ ಹಿಂತೆಗೆದುಕೊಳ್ಳುವಿಕೆ/ಖಾಸಗೀಕರಣ/ವಿಲೀನ/ ಮುಚ್ಚುವಿಕೆ ಮುಂತಾದ ವಿಷಯಗಳಲ್ಲಿ ವಿಸ್ತೃತ ಸಲಹೆಗಳನ್ನು ನೀಡುವುದು ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರವು ಪರಿಶೀಲಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು.

ಮಂಗಳೂರು ವಿದ್ಯುತ್ ಯೋಜನೆಯಿಂದ ಕೊಜೆಂಟ್ರಿಕ್ ಸಂಸ್ಥೆ ವಾಪಸ್ಸು ತೆಗೆದುಕೊಂಡಿರುವುದು

802 - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರು ವಿದ್ಯುತ್ ಯೋಜನೆಯಿಂದ ಕೊಜೆಂಟ್ರಿಕ್ಸ್ ಸಂಸ್ಥೆಯು ವಾಪಸ್ಸು ತೆಗೆದುಕೊಂಡಿರುವುದು ನಿಜವೇ?*

ಆ) *ದಿನಾಂಕ 30-7-92ರಂದು ಅಮೆರಿಕಾದ ಕೊಜೆಂಟ್ರಿಕ್ಸ್ ಸಂಸ್ಥೆಯೊಂದಿಗೆ*

ಮಾಡಿಕೊಂಡಿರುವ ಒಪ್ಪಂದವನ್ನು ಅದರ ಉತ್ತರಾಧಿಕಾರಿಗಳೊಂದಿಗೆ ಅಥವಾ ಮುಂಬರುವ ಉತ್ಪಾದಕರಿಗೆ ವರ್ಗಾವಣೆ ಮಾಡಲು ಅವಕಾಶವಿದೆಯೇ?

ಇ) ಮಂಗಳೂರು ವಿದ್ಯುತ್ ಸಂಸ್ಥೆಗೆ ಅಮೆರಿಕಾದ ಕೊಜೆಂಟ್ರಿಕ್ಸ್ ಸಂಸ್ಥೆಯ ಹೆಸರಿನಲ್ಲಿ ಎಫ್.ಐ.ಎ.ಬಿ. ಒಪ್ಪಿಗೆಯನ್ನು ನೀಡಲಾಗಿದೆಯೇ?

ಈ) ಹೀಗಿದ್ದಲ್ಲಿ ಅನುಮೋದಿತ ಎಫ್.ಐ.ಎ.ಬಿ. ಯನ್ನು ಚೈನಾಲೈಟ್ ಪವರ್ ಸಂಸ್ಥೆಯ ಹೆಸರಿಗೆ ವರ್ಗಾಯಿಸಲಾಗುವುದೇ ಅಥವಾ ನೂತನ ಎಫ್.ಐ.ಎ.ಬಿ. ಒಪ್ಪಿಗೆಯ ಅವಶ್ಯಕತೆಯಿದೆಯೇ?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಮೆ: ಕೊಜೆಂಟ್ರಿಕ್ಸ್ ಸಂಸ್ಥೆಯು ಮಂಗಳೂರು ವಿದ್ಯುತ್ ಯೋಜನೆಯಿಂದ ಹಿಂತೆಗೆದುಕೊಂಡಿದೆ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ಕಾನೂನು ಪರಿಣಿತರ ಅಭಿಪ್ರಾಯ ಪಡೆದು ಶೀಘ್ರವೇ ತೀರ್ಮಾನವನ್ನು ಕೈಗೊಳ್ಳಲಾಗುವುದು.

ಇ) 1993ರಲ್ಲಿ ಕೊಜೆಂಟ್ರಿಕ್ಸ್ ಸಂಸ್ಥೆಗೆ ಎ.ಎಫ್.ಐ.ಪಿ.ಬಿ ಒಪ್ಪಿಗೆಯನ್ನು ನೀಡಿದ್ದು, ತರುವಾಯ ಇದನ್ನು ಮಂಗಳೂರು ಪವರ್ ಸಂಸ್ಥೆಗೆ ವರ್ಗಾಯಿಸಲಾಯಿತು. ಮಂಗಳೂರು ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಅಮೆರಿಕಾದ ಕೊಜೆಂಟ್ರಿಕ್ಸ್ ಹಾಗೂ ಹಾಂಗ್‌ಕಾಂಗ್ ಮೂಲಕ ಸಿ.ಎಲ್.ಪಿ. ಸಂಸ್ಥೆಗಳು ಸಹಭಾಗಿತ್ವದಲ್ಲಿ ಮಂಗಳೂರು ಪವರ್ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು.

ಈ) ಈ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ನಂತರ ಸರ್ಕಾರವು ತೀರ್ಮಾನ ತೆಗೆದುಕೊಳ್ಳಲಿದೆ.

ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ

803 - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸಹಾಯಧನವು ಸೇರಿದಂತೆ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತಕ್ಕೆ ಬರಬೇಕಾದ ಬಾಕಿ ಎಷ್ಟು?

ಆ) ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸಲು ಹಮ್ಮಿಕೊಂಡಿರುವ ಕಾಲ ಯೋಜನೆ ಏನು?

ಇ) ಈ ವಿಚಾರವನ್ನು ತೀರ್ಮಾನಿಸಲು ಏನಾದರೂ ಸಮಾಲೋಚಕರನ್ನು ನೇಮಕ ಮಾಡಲಾಗಿದೆಯೇ?